ಹೆಚ್ಚು ಕುಪ್ಪಣ್ಣಯ್ಯನವರಿಗೆ ಆಗಿತ್ತು. 'ದಾಸುಭಟ್ರನ್ನು ಸೋಲಿಸಿದ ಶ್ರೀಕಾಂತ ಭಟ್ಟರಿಗಿಂತ ದಾಸುಭಟ್ರೇ ಹೆಚ್ಚು ಅರ್ಹ ಅಭ್ಯರ್ಥಿ. ಬಾಯಿ ಹರಕು ಎಂಬುದನ್ನು ಬಿಟ್ಟರೆ, ಅವರ ಸಮಾಜಮುಖಿ ಚಿಂತನೆ, ಭ್ರಷ್ಟರನ್ನು ಖಂಡಿಸುವ ಚಿಂತನೆ ಅದ್ಭುತ' ಎಂದು ಕುಪ್ಪಣ್ಣಯ್ಯ ಹೇಳುತ್ತಿದ್ದರು. ಮತ ಕೇಳುವಲ್ಲಿಗೆ ಹೋದಾಗಲೆಲ್ಲ ಅಧ್ಯಕ್ಷ ಸ್ಥಾನದ ಅಭ್ಯರ್ಥಿಯನ್ನು ಹೆಚ್ಚು ಟೀಕಿಸಿದ್ದೇ ದಾಸುಭಟ್ರ ಸೋಲಿಗೆ ಕಾರಣ ಎಂದು ಅನೇಕರ ಅಭಿಪ್ರಾಯ. 'ಬರುವ ಚುನಾವಣೆಯಲ್ಲಿ ನಿಮ್ಮ ಜೊತೆ ನಾನು ಪ್ರಚಾರಕ್ಕೆ ಬರಬೇಕಾದರೆ ನೀವು ಮೌನವಾಗಿರಬೇಕು' ಎಂದು ಆ ದಿನಗಳಲ್ಲಿ ಕುಪ್ಪಣ್ಣಯ್ಯ ಹೇಳಿದ್ದರು. 'ನೋಡೋಣ' ಎಂದಷ್ಟೇ ಹೇಳಿ ದಾಸುಭಟ್ರು ಮುಗಳ್ನಕ್ಕಿದ್ದರು.

ವೀರಪ್ಪಗೌಡರ ಕುಶಲ ವಿಚಾರಿಸಿದ ಕುಪ್ಪಣ್ಣಯ್ಯ ಗೌಡರು ಬೇಡ ಎಂದರೂ, ಚಹಾವನ್ನು ಮುಂದಿಟ್ಟು, 'ಎರಡು ವಾರವಾಯಿತು ನೀವು ಬಾರದೆ! ಯಾಕೋ ನೀವು ಬಂದರೆ ನನಗೆ ಬಹಳ ಖುಷಿ. ನಮ್ಮ ಪಂಚಾಯತಿನಲ್ಲಿ ನಿಮ್ಮನ್ನು ನಾವು ಶಾಂತವೇರಿ ಗೋಪಾಲಗೌಡರು ಅಂದುಕೊಂಡಿದ್ದೇವೆ'ಎಂದು ಮುಗುಳ್ನಕ್ಕರು.

ಗೌಡರು ಅವಸರದಲ್ಲಿದ್ದ ಹಾಗೆ ಇದ್ದರು. ಅವರು, 'ಅದೆಲ್ಲ ಈಗ ಬೇಡ ಸ್ವಾಮಿ ನಮ್ಮ ದಾಸುಭಟ್ರು ಈಗ ನನ್ನನ್ನು ಕೂತು ಸಾಯಲಿಕ್ಕೆ ಬಿಡುವುದಿಲ್ಲ' ಎಂದು ಹೇಳಿದವರೇ, 'ಈ ವಾರದೊಳಗೆ ನಾನು ಎಂಟು ಹತ್ತು ಜನರನ್ನು ನಾಯಿ ಕಡಿದಿದೆ ಎಂದು ಆಸ್ಪತ್ರೆಗೆ ಕಳುಹಿಸುತ್ತೇನೆ. ಡಾಕ್ಟ್ರು, 'ಅಲ್ಲಿ ಇಂಜೆಕ್ಷನ್ ಇಲ್ಲ' ಎನ್ನುತ್ತಾರೆ. ತಕ್ಷಣ ವೈದ್ಯರು ರಾಂಪುರದ ಸಾರ್ವಜನಿಕ ಆಸ್ಪತ್ರೆಗೆ ಅವರನ್ನು ಕಳುಹಿಸುತ್ತಾರೆ. ಅಲ್ಲೂ ವೈದ್ಯಾಧಿಕಾರಿಯವರು 'ಇಂಜೆಕ್ಷನ್ ಇಲ್ಲ. ಹೊರಗಿಂದ ತನ್ನಿ' ಎಂದು ಚೀಟಿ ಬರೆದು ಕೊಡುತ್ತಾರೆ. ಆಗ ನಮಗೆ ಒಂದು ಅಸ್ತ್ರ ಸಿಕ್ಕಿದ ಹಾಗೆ ಆಗುತ್ತದೆ. ಮೊದಲು ನಮ್ಮ ಪಂಚಾಯತ್ ಅಧ್ಯಕ್ಷರನ್ನು, ಆಮೇಲೆ ಶಾಸಕರನ್ನು ತರಾಟೆಗೆ ತೆಗೆದುಕೊಳ್ಳುವ ಹಾಗೆ ಪತ್ರಿಕಾಗೋಷ್ಠಿ ಮಾಡುತ್ತೇವೆ. ಇದರಿಂದ ಆಗುವ ಲಾಭ ಅಂದರೆ ಇನ್ನು ಮೂರು ತಿಂಗಳಲ್ಲಿ ಬರುವ ಪಂಚಾಯತ್ ಚುನಾವಣೆಯಲ್ಲಿ ಜನಪರವಲ್ಲದ ಈಗಿನ ಪಂಚಾಯತ್ ಸದಸ್ಯರಿಗೆ ನೀವು ಓಟು ಕೊಡಬೇಡಿ ಎಂದು ಹೇಳುತ್ತೇವೆ. ಈ ಸುದ್ದಿ ನಿಮ್ಮಲ್ಲಿ ಮಾತ್ರ ಇರಬೇಕು. ಆಮೇಲೆ ಏನಾಗುತ್ತದೆ ಎಂದು ಕಾದು ನೋಡಿ. ನಮ್ಮ ಜೊತೆ ದಾಸುಭಟ್ರು ಇರುತ್ತಾರೆ. ನೀವೂ ಬರಬೇಕು ಎಂದು ವಿನಂತಿಸಲು ನಾನು ಬಂದದ್ದು' ಎಂದರು.

ಕುಪ್ಪಣ್ಣಯ್ಯ ಅವಕ್ಕಾದರು. ಇದಕ್ಕೆ ಹೇಗೆ ಪ್ರತಿಕ್ರಿಯಿಸಬೇಕೆಂದು ಅವರಿಗೆ ಅರ್ಥವಾಗಲಿಲ್ಲ. ನೈತಿಕವಾಗಿ ಇದು ಸರಿಯಲ್ಲ. ಆದರೆ ರಾಜಕೀಯದಲ್ಲಿ ನೈತಿಕತೆ ಎಲ್ಲಿರುತ್ತದೆ ಎಂದುಕೊಂಡ ಅವರು, "ನಿಮ್ಮ ಯೋಜನೆಯೂ, ಯೋಚನೆಯೂ ಸರಿ ಇರಬಹುದು. ನಮ್ಮಲ್ಲಿ ಒಬ್ಬ ಹುಡುಗಿ ಮಾತ್ರ ನಾಯಿ ಕಚ್ಚಿ ಸತ್ತದ್ದು ಬಿಟ್ಟರೆ, ದಾಸುಭಟ್ರದ್ದು ಭ್ರಮೆ. ಹಾಗಂತ ನಮ್ಮ ತಾಲೂಕು ಸರಕಾರಿ ಆಸ್ಪತ್ರೆಯಲ್ಲಿ ಮಾತ್ರವಲ್ಲ ನಮ್ಮೂರ ಪಿ.ಎಚ್.ಸಿ.ಯಲ್ಲೂ ರೇಬಿಪ್ಯೂರ್ ಇಂಜೆಕ್ಷನ್ ಇರಬೇಕಾದದ್ದು ಅವಶ್ಯ. ಆ ನೆಲೆಯಿಂದ ನಿಮ್ಮ ಈ ದುರಾಲೋಚನೆ ನಮ್ಮ ಡಾಕ್ಟ್ರ ಭಾಷೆಯಲ್ಲಿ ಪ್ಲಾಸಿಬೋವೇ!'ಎಂದರು. ಗೌಡರಿಗೆ ಪ್ಲಾಸಿಬೋ ಅಂದರೆ ಏನೆಂದು ತಿಳಿದಿರಲಿಲ್ಲ.

'ಹಾಗೆಂದರೆ ಏನು?'

'ನಿಮ್ಮನ್ನು ನೀವೇ ಸಂತೋಷಪಡಿಸುವುದು. ಅಂದರೆ 'ಐ ಪ್ಲೀಸ್' ಅನ್ನುತ್ತಾರೆ ನಮ್ಮ ಡಾಕ್ಟ್ರು! ರಾಜಕೀಯದಲ್ಲಿ ಎಲ್ಲರೂ ಮಾಡುತ್ತಿರುವುದು ಇದನ್ನೇ ತಾನೇ?' ಎಂದರು ಕುಪ್ಪಣ್ಣಯ್ಯ ನಗುತ್ತ 'ಇರಲಿ ಬಿಡಿ. ನಮ್ಮ ಈಗಿನ ಗುರಿ ಮುಂದಿನ ಚುನಾವಣೆಯ ವಿಜಯ ಸಂಕಲ್ಪ. ಅದಕ್ಕಾಗಿ ಇಂಥದ್ದೆಲ್ಲ ಅನಿವಾರ್ಯ' ಎಂದರು ವೀರಪ್ಪಗೌಡರು.

ಮರುದಿನದಿಂದ ಸೀತಾಪುರದ ಪಿ.ಎಚ್.ಸಿಗೆ ನಾಯಿ ಕಡಿತಕ್ಕೆ ಒಳಗಾದವರು ದಿನಕ್ಕೊಬ್ಬರಂತೆ, ಅಥವಾ ಎರಡು ದಿನಕ್ಕೊಬ್ಬರಂತೆ ಇಲ್ಲವೇ ಒಂದೇ ದಿನ ಎರಡು ಮೂರು ಮಂದಿ ಬರತೊಡಗಿದರು. ಡಾ.ರಾಯಪ್ಪನವರಿಗೆ ಆಶ್ಚರ್ಯವಾಯಿತು. ಅವರು ಬಂದವರಿಗೆಲ್ಲ, ಇಲ್ಲಿ 'ರೇಬೀಸ್ ಇಂಜೆಕ್ಷನ್ ಇಲ್ಲ. ಟಿ.ಟಿ ಕೊಡುತ್ತೇನೆ' ಎಂದಾಗ, ಪ್ರತಿಯೊಬ್ಬರೂ 'ನಮಗೆ ಟಿಟಿ ಬೇಡ, ನಾವು ರಾಂಪುರಕ್ಕೇ ಹೋಗುತ್ತೇವೆ' ಎಂದರು. ತಾಲೂಕು ಆಸ್ಪತ್ರೆಗೆ ಹೋಗಿ ಅಲ್ಲಿ ವೈದ್ಯಾಧಿಕಾರಿಯಿಂದ ರ್‍ಯಾಬಿಪ್ಯೂರ್ ವ್ಯಾಕ್ಸಿನೇಶನ್ನಿಗೆ ಚೀಟಿ ಬರೆಸಿಕೊಂಡು, ಅದನ್ನು ಚುಚ್ಚಿಸಿಕೊಳ್ಳದೆ ಮರಳಿದರು. ವಾರದೊಳಗೆ ಒಬ್ಬೊಬ್ಬರೇ ನಾಯಿ ಕಡಿತಕ್ಕೊಳಗಾಗಿ